**Internal Quality Assurance Cell**
**KANNADA UNIVERSITY, HAMPI**
**Vidyaranya – 583 276**

# ಕಾರ್ಯಾಗಾರದ ಸಂಕ್ಷಿಪ್ತ ವರದಿ










ಕನ್ನಡ ವಿಶ್ವವಿದ್ಯಾಲಯದ ಆಂತರಿಕ ಗುಣಮಟ್ಟ ಭರವಸೆ ಕೋಶ(IQAC)ವು ರಾಷ್ಟ್ರೀಯ ಮೌಲ್ಯೀಕರಣ ಮತ್ತು ಮಾನ್ಯತಾ ಪರಿಷತ್ತು(NAAC) ಬೆಂಗಳೂರು ಇವರ ಸಹಯೋಗದಲ್ಲಿ ದಿನಾಂಕ 01 ಮತ್ತು 02, ಡಿಸೆಂಬರ್ 2020 ರಂದು "ಮೌಲ್ಯೀಕರಣ ಮತ್ತು ಮಾನ್ಯತಾ ಪ್ರಕ್ರಿಯೆ" ಕುರಿತು ನಡೆಸಿದ ಎರಡು ದಿನಗಳ ರಾಷ್ಟ್ರಮಟ್ಟದ ಕಾರ್ಯಾಗಾರದ ಸಂಕ್ಷಿಪ್ತ ವರದಿ.

ರಾಷ್ಟ್ರಮಟ್ಟದ ಕಾರ್ಯಾಗಾರದ ಉದ್ಘಾಟನಾ ಸಮಾರಂಭವು ವಿಶ್ವವಿದ್ಯಾಲಯದ ಮಂಟಪ ಸಭಾಂಗಣದಲ್ಲಿ ದಿನಾಂಕ 01.12.2020ರಂದು ಐಕ್ಯುಎಸಿ ನಿರ್ದೇಶಕರಾದ ಡಾ. ಎ. ಮೋಹನ ಕುಂಟಾರ್ ಅವರ ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಗಳ ಮೂಲಕ ಆರಂಭವಾಯಿತು. ಇವರು ಎರಡು ದಿನಗಳ ಕಾರ್ಯಾಗಾರದ ಅಗತ್ಯ ಮತ್ತು ರೂಪುರೇಷೆಗಳ ಕುರಿತು ವಿವರಿಸಿದರು. ಕಾರ್ಯಾಗಾರವನ್ನು ಉದ್ಘಾಟಿಸಿದ ನ್ಯಾಕ್ ಸಲಹೆಗಾರರಾದ ಡಾ. ಗಣೇಶ ಹೆಗಡೆ ಅವರು ಉನ್ನತ ಶಿಕ್ಷಣ ಸಂಸ್ಥೆಗಳು ಬೌದ್ಧಿಕ ಮತ್ತು ಭೌತಿಕ ಗುಣಮಟ್ಟವನ್ನು ಕಾಯ್ದುಕೊಳ್ಳುವ ಉದ್ದೇಶದ ಬಗೆಗೆ ಮಾತನಾಡಿದರು. ಕನ್ನಡ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಡಾ. ಸ.ಚಿ. ರಮೇಶ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ನ್ಯಾಕ್ ಸಲಹೆಗಾರರಾದ ಡಾ. ಅಮಿಯಕುಮಾರ್ ರತ್ ಮತ್ತು ಡಾ. ಪೊನ್ನುಡಿರಾಜ್ ಅವರು ಸಮಾರಂಭದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಕುಲಸಚಿವರಾದ ಡಾ. ಎ. ಸುಬ್ಬಣ್ಣ ರೈ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಡಾ. ಅಮಿಯಕುಮಾರ್ ರತ್ ಅವರ ಪರಿಚಯಾತ್ಮಕ ಮತ್ತು ಸ್ಫೂರ್ತಿದಾಯಕ ನುಡಿಗಳಿಂದ ಕಾರ್ಯಾಗಾರದ ಮೊದಲ ಅವಧಿಯು ಆರಂಭವಾಯಿತು. ಇವರು ಟೀಚಿಂಗ್, ಲರ್ನಿಂಗ್, ಇವ್ಯಾಲ್ಯುವೇಷನ್ಸ್, ಪ್ರೋಗ್ರಾಂ ಔಟ್‌ಕಮ್ಸ್, ಗವರ್ನೆನ್ಸ್, ಲೀಡರ್‌ಶಿಪ್ ಅಂಡ್ ಮ್ಯಾನೇಜ್‌ಮೆಂಟ್ ಮಾನದಂಡಗಳ ಕುರಿತು ವಿವರಿಸಿದರು.

ನಂತರದ ಅವಧಿಯಲ್ಲಿ ಡಾ. ಗಣೇಶ ಹೆಗಡೆ ಮಾತನಾಡಿ ನ್ಯಾಕ್ ಮಾನದಂಡಗಳಲ್ಲಿರುವ ಮಾಪನಗಳು (Metrics) ಮತ್ತು ಪ್ರಮುಖ ಸೂಚಕಗಳ (Key indicators) ಬಗೆಗೆ ವಿವರವಾದ ಮಾಹಿತಿ ನೀಡಿದರು. ಕರಿಕುಲರ್ ಆಸ್ಪೆಕ್ಟ್ಸ್, ರಿಸರ್ಚ್

ಇನ್ನೊವೇಷನ್ ಅಂಡ್ ಎಕ್ಸ್‌ಟೆನ್ಷನ್ ಮತ್ತು ಆಂತರಿಕ ಗುಣಮಟ್ಟ ಭರವಸೆ ವರದಿ (ಎಕ್ಯುಎಆರ್) ಬಗೆಗೂ ಅವರು ವಿವರಿಸಿದರು.

ಇನ್ನೊಬ್ಬ ಸಲಹೆಗಾರರಾದ ಡಾ. ಪೊನ್ನುಡಿರಾಜ್ ಅವರು ಸ್ಟುಡೆಂಟ್ ಸಪೋರ್ಟ್ ಅಂಡ್ ಪ್ರೊಗ್ರೆಷನ್, ಅಲುಮ್ನಿ ಅಸೋಸಿಯೇಷನ್, ಇನ್ಸಿಟ್ಯೂಷನಲ್ ವ್ಯಾಲ್ಯೂಸ್ ಅಂಡ್ ಬೆಸ್ಟ್ ಪ್ರಾಕ್ಟೀಸಸ್ ಮಾನದಂಡಗಳ ಬಗೆಗೆ ವಿವರಿಸಿದರು. ಆಯಾ ಕಾಲಕ್ಕೆ ಮಾಹಿತಿಗಳನ್ನು ವೆಬ್‌ಸೈಟ್‌ಗಳಲ್ಲಿ ಅಪ್‌ಲೋಡ್ ಮಾಡುವುದು ಉನ್ನತ ಶಿಕ್ಷಣ ಸಂಸ್ಥೆಗಳು ದಾಖಲೆಗಳನ್ನು ಸಂರಕ್ಷಿಸುವ ಬಹುಮುಖ್ಯ ವಿಧಾನಗಳಲ್ಲಿ ಒಂದು ಎಂದು ವಿವರಿಸಿದರು.

ಭಾಗವಹಿಸಿದವರು ಕೇಳಿದ ಪ್ರಶ್ನೆಗಳಿಗೆ, ಸಂಪನ್ಮೂಲ ವಿದ್ವಾಂಸರು ನೀಡಿದ ಉತ್ತರಗಳ ಮೂಲಕ ನ್ಯಾಕ್ ಪ್ರಕ್ರಿಯೆ ಬಗೆಗೆ ಸ್ಪಷ್ಟತೆ ಪಡೆದರು. ಭಾಗವಹಿಸಿದವರ ಪರವಾಗಿ ಪ್ರಾಧ್ಯಾಪಕರಾದ ಡಾ. ರಹಮತ್ ತರೀಕೆರೆ ಅವರು ಮತ್ತು ಸಹ ಪ್ರಾಧ್ಯಾಪಕರಾದ ಡಾ. ಅಮರೇಶ ಯತಗಲ್ ಅವರು ಕಾರ್ಯಾಗಾರವು ತುಂಬಾ ಫಲಪ್ರದವಾಗಿತ್ತು ಎಂಬ ಅಭಿಪ್ರಾಯವನ್ನು ಮಂಡಿಸಿದರು.

ಪಿಪಿಟಿ ಸಹಿತ ಪ್ರಸ್ತುತಪಡಿಸಿರುವ ಉಪಯುಕ್ತ ಮಾಹಿತಿಗಳಿಗಾಗಿ ಐಕ್ಯುಎಸಿ ಸಹಾಯಕ ನಿರ್ದೇಶಕರಾದ ಶ್ರೀಮತಿ ಡಿ. ಪ್ರಭಾ ಅವರು ಸಂಪನ್ಮೂಲ ವ್ಯಕ್ತಿಗಳಿಗೆ ವಿಶೇಷ ಕೃತಜ್ಞತೆಗಳನ್ನು ಸಲ್ಲಿಸಿದರು. ಹಾಗೆಯೇ ಕಾರ್ಯಾಗಾರವನ್ನು ನಡೆಸಲು ಪ್ರೋತ್ಸಾಹ ಮತ್ತು ಬೆಂಬಲ ನೀಡಿದ್ದಕ್ಕಾಗಿ ವಿಶ್ವವಿದ್ಯಾಲಯದ ಆಡಳಿತಕ್ಕೆ ಕೃತಜ್ಞತೆಗಳನ್ನು ಸಲ್ಲಿಸುವುದರ ಮೂಲಕ ಕಾರ್ಯಾಗಾರವು ಕೊನೆಗೊಂಡಿತು. ಕಾರ್ಯಾಗಾರದಲ್ಲಿ ಸುಮಾರು 65 ಜನರು ಸಕ್ರಿಯವಾಗಿ ಭಾಗವಹಿಸಿದ್ದರು ಮತ್ತು ಕೆಲವರು ಆನ್‌ಲೈನ್ ಮೂಲಕ ಕೂಡಾ ಕಾರ್ಯಾಗಾರದ ಪ್ರಯೋಜನವನ್ನು ಪಡೆದರು.








